ಸಮಾಲೋಚನೆ

ಮಕ್ಕಾದಿಂದ ವಲಸೆ ಹೋದ ಮುಸ್ಲಿಮರನ್ನು ಮಕ್ಕಾವಾಸಿಗಳು ಮದೀನದಲ್ಲೂ ನೆಮ್ಮದಿಯಿಂದ ಇರಲು ಬಿಡಲಿಲ್ಲ. ಮದೀನದ ನಿವಾಸಿಗಳಾದ ಅನ್ಸಾರರಿಗೆ ಆಗಾಗ, "ಮುಹಾಜಿರರನ್ನು ನಗರದಿಂದ ಹೊರ ಹಾಕಿರಿ. ಅನ್ಯಥಾ ನಾವು ನಿಮ್ಮೆಲ್ಲರನ್ನೂ ಮದೀನದಿಂದ ಹೊರ ಹಾಕುವೆವು" ಎಂದು ಬೆದರಿಕೆಯನ್ನು ಒಡ್ಡತೊಡಗಿದರು. ಪರಿಸ್ಥಿತಿಯು ಕಾವೇರುತ್ತಾ ಕೊನೆಗೆ ಯುದ್ಧದ ವರೆಗೂ ತಲುಪಿ ಬಿಟ್ಟಿತು. ಸತ್ಯ–ಮಿಥ್ಯಗಳ ನಡುವಿನ ಮೊದಲ ಅಧಿಕೃತ ಸಮರವಾದ ಬದ್ರ್ ಯುದ್ಧ ಸಂಭವಿಸುತ್ತದೆ. ಈ ಅಪಾಯಕಾರಿ ಸನ್ನಿವೇಶದಲ್ಲಿಯೂ ಮಾನವತೆಯ ಮಹಾನ್ ಗುರುವರ್ಯರು(ಸ) ನೇರವಾಗಿ ಆದೇಶವನ್ನು ಜಾರಿಗೊಳಿಸುವುದರ ಬದಲು ತಮ್ಮ ಸಹಾಬಿಗಳೊಡನೆ ಸಮಾಲೋಚನೆ ನಡೆಸುತ್ತಾರೆ. "ನಾವು ಶತ್ರುಗಳ ವಿರುದ್ಧ ಯುದ್ಧ ಮಾಡೋಣ. ಆದರೆ ನಗರದಿಂದ ಹೊರಗೆ ಹೋಗಿ ಕಾದಾಡೋಣ" ಎಂದು ಸಹಾಬಿಗಳೂ ಸಲಹೆ ನೀಡುತ್ತಾರೆ. ಪ್ರಖ್ಯಾತ ಸಹಾಬಿ ಮಿಕ್ದಾದ್ ಬಿನ್ ಅಸ್ವದ್(ರ) ಅತ್ಯುತ್ಸಾಹದಿಂದ ಹೇಳಿದರು, "ಅಲ್ಲಾಹನ ಸಂದೇಶವಾಹಕರೇ(ಸ)! ತಾವು ಯುದ್ಧದ ತೀರ್ಮಾನ ಕೈಗೊಳ್ಳಿರಿ. ನಾವು, ಪ್ರವಾದಿ ಮೂಸಾರೊಡನೆ(ಅ) ಬನೀ ಇಸ್ರಾಯೀಲರು ಹೇಳಿದಂತೆ ನೀವು ಮತ್ತು ನಿಮ್ಮ ಅಲ್ಲಾಹ್ ಹೋಗಿ ಯುದ್ಧ ಮಾಡಿರಿ, ನಾವು ಇಲ್ಲೇ ಕೂತು ನೋಡುತ್ತೇವೆ ಎಂದು ಹೇಳಲಾರೆವು. ಬದಲಾಗಿ ತಮ್ಮ ಸಂಗಡ ಹೋರಾಡುವೆವು." ಪ್ರವಾದಿವರ್ಯರು(ಸ) ಸಹಾಬಿಗಳ ಸಲಹೆಯನ್ನು ಸ್ವಾಗತಿಸಿದರು ಮತ್ತು ಯುದ್ಧಕ್ಕೆ ಹೊರಡಲು ಆದೇಶಿಸಿದರು.

ಪ್ರವಾದಿವರ್ಯರು(ಸ) ಹೆಜ್ಜೆ ಹೆಜ್ಜೆಗೂ ಸಹಾಬಿಗಳೊಡನೆ ಸಮಾಲೋಚಿಸಿದರು. ಅವರು ಯುದ್ಧ ರಂಗವನ್ನು ತಲುಪಿ, ಒಂದು ಕಡೆ ತಂಗಿದರು. ಆಗ ಹಬ್ಬಾಬ್ ಬಿನ್ ಮುಂದಿರ್(ರ) ಮುಂದೆ ಬಂದು ಹೇಳಿದರು, "ಅಲ್ಲಾಹನ ಸಂದೇಶವಾಹಕರೇ(ಸ)! ಈ ಸ್ಥಳದಲ್ಲಿ ತಂಗಲು ಅಲ್ಲಾಹನು ಆದೇಶಿಸಿರುವನೇ ಅಥವಾ ತಾವು ಯುದ್ಧದ ತಂತ್ರವಾಗಿ ಈ ಸ್ಥಳವನ್ನು ಆರಿಸಿರುವಿರಾ?" ಪ್ರವಾದಿವರ್ಯರು(ಸ), "ಅಲ್ಲಾಹನ ಆದೇಶದಂತೆ ಅಲ್ಲ, ಬದಲಾಗಿ ನನ್ನ ಅಭಿಪ್ರಾಯದಂತೆ ತಂಗುವ ನಿರ್ಧಾರ ತಳೆದಿರುವೆನು" ಎಂದರು. ಆಗ ಹಬ್ಬಾಬ್ ಬಿನ್ ಮುಂದಿರ್(ರ) ಈ ರೀತಿ ಸಲಹೆಯನ್ನಿತ್ತರು, "ಈ ಸ್ಥಳವು ಖಂಡಿತವಾಗಿಯೂ ಸೂಕ್ತವಲ್ಲ. ಬಾವಿಯ ಬಳಿ ಡೇರೆ ಹಾಕೋಣ. ಬಾವಿಯನ್ನು ನಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳೋಣ." ಪ್ರವಾದಿವರ್ಯರು(ಸ) ಈ ಸಲಹೆಯನ್ನು ಮೆಚ್ಚಿದರು. ತತ್ಪರಿಣಾಮವಾಗಿ ಮುಸ್ಲಿಮರು ಬಾವಿಯಿಂದ ಪ್ರಯೋಜನವನ್ನು ಪಡೆದುಕೊಂಡರು. ಮಕ್ಕಾದ ಸತ್ಯನಿಷೇಧಿಗಳಿಗೆ ಅದರಿಂದ ಪ್ರಯೋಜನ ಪಡೆಯಲು ಆಗಲಿಲ್ಲ. ಹೀಗೆ ಬದ್ರ್ ಯುದ್ಧದಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ದಯಪಾಲಿಸಿದನು. ಎಪ್ಪತ್ತು ಮಂದಿ ಕುರೈಶಿಗಳನ್ನು ಮುಸ್ಲಿಮರು ಬಂಧಿಸಿದರು. ಈ ಸಂದರ್ಭದಲ್ಲೂ ಪ್ರವಾದಿವರ್ಯರು(ಸ) ಕೈದಿಗಳೊಡನೆ ಏನು ಮಾಡಬೇಕು ಎಂಬುದಾಗಿ ಸಹಾಬಿಗಳೊಡನೆ ಸಮಾಲೋಚಿಸಿದರು. ಅವರನ್ನು ಫಿದಿಯಾ ಪಡೆದು ಬಿಡಬೇಕು ಎಂದು ಅಬೂಬಕರ್(ರ) ಸಲಹೆ ನೀಡಿದರು. ಕೈದಿಗಳನ್ನೆಲ್ಲ ವಧಿಸಿ ಬಿಡಬೇಕೆಂದು ಉಮರ್(ರ) ಸಲಹೆಯಿತ್ತರು. ಆದರೆ ಪ್ರವಾದಿವರ್ಯರು(ಸ) ಅಬೂಬಕರ್ ಸಿದ್ದೀಕ್‌ರ(ರ) ಸಲಹೆಯನ್ನು ಮೆಚ್ಚಿದರು ಮತ್ತು ಕೈದಿಗಳನ್ನು ಫಿದಿಯ ಪಡೆದು ಬಿಡುಗಡೆಗೊಳಿಸಿದರು.

ಅದೇ ರೀತಿ ಪ್ರವಾದಿ ಸುಲೈಮಾನ್‌ರ(ಅ) ಕಾಲದಲ್ಲಿ ಸಬಾ ಎಂಬ ರಾಜ್ಯವನ್ನು ಬಿಲ್ಕೀಸ್ ರಾಣಿ ಆಳುತ್ತಿದ್ದಳು. ಆಕೆಯ ಯುಕ್ತಿವಂತಿಕೆ ಮತ್ತು ವಿಚಾರವಂತಿಕೆಯ ಕಾರಣವಾಗಿಯೇ ಆಕೆಯನ್ನು ಆ ಸಮುದಾಯದವರು ತಮ್ಮ ಆಡಳಿತಗಾರ್ತಿಯನ್ನಾಗಿ ಸ್ವೀಕರಿಸಿದ್ದರು. ಸಬಾದ ಸಮುದಾಯದವರು ಸೂರ್ಯನನ್ನು ಆರಾಧಿಸುತ್ತಿದ್ದರು. ಪ್ರವಾದಿ ಸುಲೈಮಾನರು(ಅ) ಆಕೆಗೆ ಏಕದೇವತ್ವದ ಸಂದೇಶವನ್ನು ಹೊಂದಿದ ಪತ್ರವನ್ನು ರವಾನಿಸುತ್ತಾರೆ. ಪತ್ರ ತಲಪುತ್ತಲೇ ರಾಣಿ ತನ್ನ ಆಸ್ಥಾನಿಕರೊಡನೆ ಒಂದು ಮಾತನ್ನು ಹೇಳುತ್ತಾರೆ. ಅದನ್ನು ಕುರ್‌ಆನ್ ಈ ರೀತಿ ಉಲ್ಲೇಖಿಸಿದೆ,

www.uzairfalahi.com

﴿ قَالَتْ يَٰٓأَيُّهَا ٱلْمَلَؤُا۟ إِنِّىٓ أُلْقِىَ إِلَىَّ كِتَٰبٌ كَرِيمٌ ﴿٢٩﴾ إِنَّهُۥ مِن سُلَيْمَٰنَ وَإِنَّهُۥ بِسْمِ ٱللَّهِ ٱلرَّحْمَٰنِ ٱلرَّحِيمِ ﴿٣٠﴾ أَلَّا
تَعْلُوا۟ عَلَىَّ وَأْتُونِى مُسْلِمِينَ ﴿٣١﴾ قَالَتْ يَٰٓأَيُّهَا ٱلْمَلَؤُا۟ أَفْتُونِى فِىٓ أَمْرِى مَا كُنتُ قَاطِعَةً أَمْرًا حَتَّىٰ تَشْهَدُونِ ﴿٣٢﴾ ﴾
النمل: ٢٩ - ٣٢

“ರಾಣಿಯು ಹೀಗೆ ಹೇಳಿದಳು, ‘ಆಸ್ಥಾನದವರೇ, ನನ್ನ ಕಡೆಗೆ ಒಂದು ಮಹತ್ವಪೂರ್ಣ ಪತ್ರವು ಎಸೆಯಲ್ಪಟ್ಟಿದೆ. ಅದು ಸುಲೈಮಾನರ ಕಡೆಯಿಂದ ಬಂದಿದೆ ಮತ್ತು ಅದನ್ನು ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ ಆರಂಭಿಸಲಾಗಿದೆ. ಅದರಲ್ಲಿ, ನನ್ನ ವಿರುದ್ಧ ಬಂಡಾಯವೇಳಬೇಡಿರಿ ಮತ್ತು ಮುಸ್ಲಿಮ್ ಆಗಿ ನನ್ನ ಬಳಿ ಹಾಜರಾಗಿರಿ ಎಂದಿದೆ.’ (ಪತ್ರವನ್ನು ಓದಿ ಹೇಳಿ) ರಾಣಿಯು, ‘ಜನಾಂಗದ ಸರದಾರರೇ, ನನ್ನ ಈ ವಿಷಯದ ಬಗ್ಗೆ ನನಗೆ ಸಲಹೆ ಕೊಡಿರಿ. ನಾನು ಯಾವ ವಿಷಯದಲ್ಲೂ ನಿಮ್ಮನ್ನು ಬಿಟ್ಟು ತೀರ್ಮಾನ ಕೈಗೊಳ್ಳುವುದಿಲ್ಲ’ ಎಂದು ಹೇಳಿದಳು.” (ಪವಿತ್ರ ಕುರ್‌ಆನ್: 27: 29–32)

ಈ ರೀತಿ ಸಬಾದ ರಾಣಿಯು ತನ್ನ ಸಮುದಾಯದ ಬುದ್ಧಿಜೀವಿಗಳೊಡನೆ ಸಮಾಲೋಚನೆ ನಡೆಸುತ್ತಾರೆ ಮತ್ತು ಪ್ರವಾದಿ ಸುಲೈಮಾನರ(ಅ) ಸನ್ನಿಧಿಯಲ್ಲಿ ಹಾಜರಾಗಿ, ಇಸ್ಲಾಮ್ ಸ್ವೀಕರಿಸುತ್ತಾರೆ. ನಿಶ್ಚಯವಾಗಿಯೂ ಇದು ಸಮಾಲೋಚನೆಯ ಸಮೃದ್ಧಿ ಮತ್ತು ಅಲ್ಲಾಹನ ಅನುಗ್ರಹವಾಗಿತ್ತು.

ಸಮಾಲೋಚನೆಯ ಅರ್ಥ ವ್ಯಾಖ್ಯಾನ

ಪರಸ್ಪರ ಸಮಾಲೋಚನೆ ಎಂದರೆ, ಒಂದು ವಿಷಯದಲ್ಲಿ ಸರಿಯಾದ ಮಗ್ಗುಲು ಏನಿದೆಯೋ ಅದು ಸ್ಪಷ್ಟಗೊಳ್ಳುವ ವರೆಗೆ ಮತ್ತು ತಪ್ಪಾದ ಮಗ್ಗುಲಿನಿಂದ ರಕ್ಷೆ ಪಡಲು ಅದೂ ಕೂಡ ಮುಂದೆ ಬರುವ ವರೆಗೆ ಮಾನವನು ಆ ವಿಷಯದಲ್ಲಿ ಅನುಭವ, ಜ್ಞಾನವನ್ನು ಹೊಂದಿರುವ ಯುಕ್ತಿವಂತರ ಸಲಹೆಯನ್ನು ಅರಿಯಲು ಪ್ರಯತ್ನಿಸುವುದಾಗಿದೆ.

ಇಸ್ಲಾಮಿನಲ್ಲಿ ಆಡಳಿತ ವ್ಯವಸ್ಥೆಗೆ ಮೂರು ಬುನಾದಿಗಳಿವೆ. ನ್ಯಾಯ, ಸಮಾನತೆ ಮತ್ತು ಸಮಾಲೋಚನೆ. ಇಸ್ಲಾಮಿನಲ್ಲಿ ಸಮಾಲೋಚನೆಗೆ ಎಷ್ಟು ಮಹತ್ವ ಇದೆ ಎಂಬುದು ಇದರಿಂದ ತಿಳಿಯುತ್ತದೆ. ಪವಿತ್ರ ಕುರ್‌ಆನಿನಲ್ಲಿ ಅಶ್ಶೂರಾ ಎಂಬ ಅಧ್ಯಾಯವೇ ಇದೆ. ಅಲ್ಲದೆ ಅಲ್ಲಾಹನು ತನ್ನ ಪ್ರವಾದಿಗೆ(ಸ) ಸಮಾಲೋಚನೆ ನಡೆಸಲು ಆದೇಶಿಸಿರುವುದರಿಂದಲೂ ಅದರ ಮಹತ್ವವನ್ನು ಅರಿಯಬಹುದಾಗಿದೆ. ಅಲ್ಲಾಹ್ ಸೌಜನ್ಯದ ಮಹತ್ವವನ್ನು ತಿಳಿಸುವುದರ ಜತೆಗೆ ಹೇಳುತ್ತಾನೆ,

﴿ وَشَاوِرْهُمْ فِى ٱلْأَمْرِ ﴿١٥٩﴾ ﴾ آل عمران: ١٥٩

“ಮತ್ತು ಧರ್ಮದ ಕೆಲಸಗಳಲ್ಲಿ ಇವರೊಡನೆ ಸಮಾಲೋಚಿಸಿರಿ.” (ಪವಿತ್ರ ಕುರ್‌ಆನ್: 3: 159)

ಪರಸ್ಪರ ಸಮಾಲೋಚನೆಯನ್ನು ಅಲ್ಲಾಹನು ಸತ್ಯವಿಶ್ವಾಸಿಗಳ ಗುಣವಿಶೇಷವೆಂದು ಬಣ್ಣಿಸಿದ್ದಾನೆ ಮತ್ತು ಅದನ್ನು ನಮಾಝ್ ಹಾಗೂ ಝಕಾತ್‌ನ ಜತೆಯಲ್ಲಿ ಸೇರಿಸಿ ಹೀಗೆ ಹೇಳಿರುವನು,

﴿ شُورَىٰ بَيْنَهُمْ ﴿٣٨﴾ ﴾ الشورى: ٣٨

“ತಮ್ಮ ವ್ಯವಹಾರಗಳನ್ನು ಪರಸ್ಪರ ಸಮಾಲೋಚನೆಯಿಂದ ನಡೆಸುತ್ತಾರೆ.” (ಪವಿತ್ರ ಕುರ್‌ಆನ್: 42: 38)

ಯಾವ ವಿಷಯಗಳಲ್ಲಿ ಸಮಾಲೋಚಿಸಬೇಕು?

ಯಾವ ವಿಷಯಗಳಲ್ಲಿ ಅಲ್ಲಾಹ್ ಅಥವಾ ಅಲ್ಲಾಹನ ಸಂದೇಶವಾಹಕರ(ಸ) ಸ್ಪಷ್ಟ ಮಾರ್ಗದರ್ಶನವಿದೆಯೋ ಆ ವಿಷಯಗಳು ಸಮಾಲೋಚನೆಯ ಪರಿಧಿಯಿಂದ ಹೊರಗಿರುವುದು. ಏಕೆಂದರೆ ಕುರ್‌ಆನ್ ಮತ್ತು ಹದೀಸ್‌ಗಳ ಆದೇಶವಿರುತ್ತಾ ಇತರರ ಅಭಿಪ್ರಾಯವನ್ನು ಪಡೆಯುವ

www.uzairfalahi.com

ಅಗತ್ಯವಿಲ್ಲ. ಅಲ್ಲಾಹನ ಸಂದೇಶವಾಹಕರು(ಸ) ಯಾವುದಾದರೂ ವಿಷಯದಲ್ಲಿ ಅಲ್ಲಾಹನ ಆದೇಶ ಬರುವ ವರೆಗೆ ಸಹಾಬಿಗಳೊಡನೆ ಸಮಾಲೋಚಿಸುತ್ತಿದ್ದರು. ವಹೀ ಅವತೀರ್ಣವಾದಾಗ ತಡಮಾಡದೆ ಅದನ್ನು ಜಾರಿಗೊಳಿಸುತ್ತಿದ್ದರು. ಅಬೂ ಹುರೈರಾ(ರ) ಹೇಳುತ್ತಾರೆ, "ಅಲ್ಲಾಹನ ಸಂದೇಶವಾಹಕರಿಗಿಂತ(ಸ) ಹೆಚ್ಚು ತಮ್ಮ ಸಹಚರರೊಡನೆ ಸಮಾಲೋಚಿಸುವವರನ್ನು ಕಂಡಿಲ್ಲ."

ಸಮಾಲೋಚನೆಯ ಮಹತ್ವ

ಇತರರೊಡನೆ ಸಮಾಲೋಚನೆ ನಡೆಸುವವನು ಎಂದೂ ಲಜ್ಜಿತನಾಗುವುದಿಲ್ಲ. ಅಲ್ಲಾಹನು ಅಂತಹ ವ್ಯಕ್ತಿಗೆ ಒಳಿತನ್ನು ದಯಪಾಲಿಸುತ್ತಾನೆ ಮತ್ತು ವ್ಯವಹಾರದ ವಾಸ್ತವಿಕತೆಯ ಕಡೆಗೆ ಮಾರ್ಗದರ್ಶನವನ್ನೀಯುತ್ತಾನೆ. ಪ್ರವಾದಿವರ್ಯರು(ಸ) ಹೀಗೆಂದಿರುವರು,

«مَنْ أَرَادَ أَمْرًا فَشَاوَرَ فِيهِ امْرَأً مُسْلِمًا وَفَّقَهُ اللهُ لِأَرْشَدِ أُمُورِهِ» (الطبراني)

"ಒಬ್ಬನು ಯಾವುದಾದರೊಂದು ಕೆಲಸದ ಇರಾದೆಯನ್ನು ಮಾಡಿದರೆ ಮತ್ತು ಅದರ ಬಗ್ಗೆ ಮುಸ್ಲಿಮ್ ಸಹೋದರನೊಡನೆ ಸಮಾಲೋಚಿಸಿದರೆ ಅಲ್ಲಾಹನು ಅವನಿಗೆ ಸರಿಯಾದ ಕೆಲಸದ ಅನುಗ್ರಹವನ್ನು ದಯಪಾಲಿಸುವನು." (ತಬ್ರಾನಿ)

ಸಮಾಲೋಚನೆಯೇ ಮಾರ್ಗದರ್ಶನವಾಗಿದೆ. ಎಚ್ಚರಿಕತೆ ಮತ್ತು ಜಾಗರೂಕತೆಯು ಅದನ್ನೇ ಅವಲಂಬಿಸಿದೆ. ಇದರಿಂದ ಕೆಲಸವು ಸುಸೂತ್ರವಾಗುತ್ತದೆ ಮತ್ತು ಯೋಜನೆ–ವ್ಯವಸ್ಥೆಯಲ್ಲಿ ದೃಢತೆಯುಂಟಾಗುತ್ತದೆ. ಸಮಾಲೋಚನೆಯಿಂದ ಮಾನವನು ಇತರರ ಅನುಭವ ಮತ್ತು ಬುದ್ಧಿವಂತಿಕೆಯಿಂದ ಪ್ರಯೋಜನವನ್ನು ಪಡೆಯುತ್ತಾನೆ. ಈ ಸಮಾಲೋಚನೆಯು ಮಾನವನನ್ನು ಏಕಮುಖನಾಗುವುದರಿಂದ ತಡೆಯುತ್ತದೆ, ಅವನಲ್ಲಿರಬಹುದಾದಂತಹ ಕೊರತೆಗಳನ್ನು ದೂರಮಾಡುತ್ತದೆ ಮತ್ತು ಅವನನ್ನು ಸತ್ಯಮಾರ್ಗದಲ್ಲಿ ನಿರಂತರ ಸಾಗುವಂತೆ ಮಾಡುತ್ತದೆ.

ಇಸ್ತಿಖಾರ

ಮಾನವನು ತನ್ನ ವ್ಯವಹಾರಗಳಲ್ಲಿ ಬುದ್ಧಿಜೀವಿಗಳೊಡನೆ ಸಮಾಲೋಚನೆಯ ಇರಾದೆಯನ್ನು ಮಾಡುವಾಗ, ಅದರಲ್ಲಿ ಅಲ್ಲಾಹನ ಹಕ್ಕು ಅತ್ಯಧಿಕ ಇರುತ್ತದೆ. ಅಂದರೆ ಮೊತ್ತಮೊದಲು ಅಲ್ಲಾಹನೊಡನೆ ಸಮಾಲೋಚಿಸಬೇಕು. ಏಕೆಂದರೆ ಮಾರ್ಗದರ್ಶನದ ಮೂಲ ಸೆಲೆ ಮತ್ತು ನೇರ ಮಾರ್ಗದಲ್ಲಿ ನಡೆಸುವವನು ಅವನೇ ಆಗಿದ್ದಾನೆ. ಹಾಗಾಗಿ ಯಾವಾಗಲಾದರೂ ಮುಸ್ಲಿಮನ ಕೆಲಸವು ಕೆಟ್ಟು ಹೋದರೆ ಮತ್ತು ವ್ಯವಹಾರದಲ್ಲಿ ಗೊಂದಲವುಂಟಾಗಿ, ಅವನಿಗೆ ಯಾವುದೇ ದಾರಿ ಕಾಣದೆ ಹೋದರೆ, ತಕ್ಷಣವೇ ಅಲ್ಲಾಹನೆಡೆಗೆ ಮುಖ ಮಾಡಬೇಕು. ಅಂದರೆ ಎರಡು ರಕಅತ್ ನಮಾಝ್ ನಿರ್ವಹಿಸಲು ಮತ್ತು ವ್ಯವಹಾರವನ್ನು ಅಲ್ಲಾಹನಿಗೆ ಒಪ್ಪಿಸಿ ಬಿಡಬೇಕೆಂದು ಅಲ್ಲಾಹನ ಸಂದೇಶವಾಹಕರು(ಸ) ಕಲಿಸಿಕೊಟ್ಟಿದ್ದಾರೆ.

ತರುವಾಯ ಈ ರೀತಿ ಪ್ರಾರ್ಥಿಸಲು ಪ್ರವಾದಿವರ್ಯರು(ಸ) ಕಲಿಸಿರುವುದಾಗಿ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ,

«اللَّهُمَّ إِنِّي أَسْتَخِيرُكَ بِعِلْمِكَ وَأَسْتَقْدِرُكَ بِقُدْرَتِكَ، وَأَسْأَلُكَ مِنْ فَضْلِكَ العَظِيمِ، فَإِنَّكَ تَقْدِرُ وَلاَ أَقْدِرُ، وَتَعْلَمُ وَلاَ أَعْلَمُ، وَأَنْتَ عَلَّامُ الغُيُوبِ، اللَّهُمَّ إِنْ كُنْتَ تَعْلَمُ أَنَّ هَذَا الأَمْرَ خَيْرٌ لِي فِي دِينِي وَمَعَاشِي وَعَاقِبَةِ أَمْرِي - أَوْ قَالَ عَاجِلِ أَمْرِي وَآجِلِهِ - فَاقْدُرْهُ لِي وَيَسِّرْهُ لِي، ثُمَّ بَارِكْ لِي فِيهِ، وَإِنْ كُنْتَ تَعْلَمُ أَنَّ هَذَا الأَمْرَ شَرٌّ لِي فِي دِينِي وَمَعَاشِي وَعَاقِبَةِ أَمْرِي - أَوْ قَالَ فِي عَاجِلِ أَمْرِي وَآجِلِهِ - فَاصْرِفْهُ عَنِّي وَاصْرِفْنِي عَنْهُ، وَاقْدُرْ لِي الخَيْرَ حَيْثُ كَانَ، ثُمَّ أَرْضِنِي» (بخاري)

"ಓ ಅಲ್ಲಾಹ್! ನಾನು ನಿನ್ನ ಜ್ಞಾನದ ಸಹಾಯದಿಂದ ಒಳಿತನ್ನು ಬೇಡುತ್ತೇನೆ ಮತ್ತು ನಿನ್ನ ಸಾಮರ್ಥ್ಯದ ಸಹಾಯದಿಂದ ವಿಧಿಯನ್ನು ಬೇಡುತ್ತೇನೆ. ನಿನ್ನಿಂದಲೇ ನಿನ್ನ ಉನ್ನತವಾದ ಅನುಗ್ರಹವನ್ನು ಬೇಡುತ್ತಿದ್ದೇನೆ. ನಿಶ್ಚಯವಾಗಿಯೂ ನೀನೇ ಎಲ್ಲದರ ಸಾಮರ್ಥ್ಯವನ್ನು ಹೊಂದಿದವನಾಗಿರುತ್ತೀ, ನಾನು ಸಾಮರ್ಥ್ಯವನ್ನು

www.uzairfalahi.com

ಹೊಂದಿಲ್ಲ. ನೀನೇ ಎಲ್ಲವನ್ನೂ ಬಲ್ಲವನು, ನಾನು ಬಲ್ಲವನಲ್ಲ. ನೀನೇ ಅದೃಶ್ಯವನ್ನು ಅರಿಯುವವನಾಗಿರುವೆ. ಓ ಅಲ್ಲಾಹ್! ಈ ಕೆಲಸವು (ಯಾವ ಕೆಲಸವನ್ನು ಉದ್ದೇಶಿಸಿರುವಿರೋ ಅದರ ಹೆಸರನ್ನೆತ್ತಿ) ನನ್ನ ಧರ್ಮ, ನನ್ನ ಜೀವನ ಮತ್ತು ಪರಿಣಾಮಕ್ಕೆ ಸಂಬಂಧಿಸಿ ಇಹ–ಪರಲೋಕಗಳಲ್ಲಿ ಒಳಿತಿಗೆ ಪ್ರೇರಕವಾಗುವುದು ಎಂದು ನಿನಗೆ ತಿಳಿದಿದ್ದರೆ ಇದನ್ನು ನನಗೆ ಸುಲಭಗೊಳಿಸು ಹಾಗೂ ಇದನ್ನು ನನ್ನ ಪಾಲಿಗೆ ಉತ್ತಮಗೊಳಿಸು; ಇದರಲ್ಲಿ ನನಗೆ ಸಮೃದ್ಧಿಯನ್ನುಂಟು ಮಾಡು. ಈ ಕಾರ್ಯವು ನನ್ನ ಧರ್ಮ, ಜೀವನ ಮತ್ತು ಪರಿಣಾಮಕ್ಕೆ ಸಂಬಂಧಿಸಿ ಇಹ–ಪರಗಳಿಗೆ ಕೆಡುಕು ಎಂದು ನಿನಗೆ ತಿಳಿದಿದ್ದರೆ, ಈ ಕಾರ್ಯವನ್ನು ನನ್ನಿಂದ ದೂರಗೊಳಿಸು ಮತ್ತು ಇತರೆಡೆಯಿಂದ ನನಗೆ ಒಳಿತನ್ನು ದಯಪಾಲಿಸು ಹಾಗೂ ಬಳಿಕ ಆ ಕಾರ್ಯದೊಂದಿಗೆ ನನ್ನಿಂದ ಸಂತುಷ್ಟನಾಗು.” (ಬುಖಾರಿ)

* * * * *

www.uzairfalahi.com